ಮೊದಲು ಹೋಗಿ ನಿಮ್ಮ ಆಳೆತ್ತರದ ಒಂದು ಕಂಚಿನ ಮೂರ್ತಿ ಮಾಡಲು ಆರ್ಡರ್ ಕೊಟ್ಟೆ. ಇನ್ನು ಈಗ ವೆಸ್ಟ್‌ಮಿನಿಸ್ಟರ್‌ನಲ್ಲಿ ನಿಮ್ಮ ಸಮಾಧಿಗೆ ಜಾಗದ ವ್ಯವಸ್ಥೆ ಮಾಡುತ್ತಾ ಇದ್ದೀನಿ".

ಇಷ್ಟು ಹೇಳಿ ಅವನು ಆವೇಶದಿಂದ ಒಂದು ದೊಡ್ಡ ಸೋಫಾದ ಮೇಲೆ ಕುಳಿತುಬಿಟ್ಟ. ಅವನು ಕೂತದ್ದರಿಂದ ಸೋಫಾದ ಸ್ಪ್ರಿಂಗ್‌ಗಳು ಕಿರ್ ಅಂದವು. ಕೆಲವು ನಿಮಿಷಗಳವರೆಗೆ ಡಾಕ್ಟರು ಅವನ ಕಡೆಗೆ ಹುಡುಕು ನೋಟದಿಂದ ನೋಡಿ ಏನೋ ಒಂದು ಹುಡುಕುತ್ತಿದ್ದರು. ಅನಂತರ ತಮ್ಮ ಸೆಕ್ರೆಟರಿ, ಮತ್ತು ಆರ್ಡರ್ಲಿಗೆ ಏನೋ ಹೇಳಿದರು. ಅವರಿಬ್ಬರೂ ಹೊರಗೆ ಹೋಗಿಬಿಟ್ಟರು. ಡಾಕ್ಟರು ಆ ಆಗಂತುಕನ ಕಡೆ ದುಃಖಭರಿತ ಗಂಭೀರ, ಭೇದಕ ಮತ್ತು ಕೆಲವು ಕ್ಷಣಗಳ ಕಾಲ ಚಂಚಲ ನೋಟದಿಂದ ನೋಡುತ್ತಿದ್ದರು. ಆ ಕೂಡಲೇ ಗಂಭೀರ ದೃಢಮುಖ ಮುದ್ರೆ ಮಾಡಿಕೊಂಡು ಆಗಂತುಕನ ಮುಖದ ಮೇಲೆ ದೃಷ್ಟಿ ಕೀಲಿಸಿ ಹೇಳಿದರು, "ನಿಮ್ಮ ಕೆನ್ನೆಯ ಮೇಲೆ ಒಂದು ನೊಣ ಕೂತಿದೆ, ಅದನ್ನು ಓಡಿಸಲೇನು?"

ಅಷ್ಟು ಹೇಳಿ ಡಾಕ್ಟರು ಬಾಗಿ ತಮ್ಮ ಜೇಬಿನಿಂದ ರಿವಾಲ್ವರ್ ಹೊರತೆಗೆದು ಢಣ್ ಢಣ್ ಎಂದು ಆಗಂತುಕನ ವೆಯಿನ್ (ರಕ್ತನಾಳದ) ಮೇಲೆ ಮೂರು ಗುಂಡು ಹಾರಿಸಿದರು. ಕ್ಷಣಮಾತ್ರದಲ್ಲಿ ವಿಶಾಲವಾದ ಕೆನ್ನೆಯ ಗೆರೆಗಳು ರಕ್ತದ ಬುಗ್ಗೆಗಳಲ್ಲಿ ಮುಳುಗಿಹೋದವು. ಆ ಮನುಷ್ಯ ಅಲ್ಲೇ ಸೋಫಾದ ಮೇಲೆ ಸತ್ತುಬಿದ್ದ. ಸ್ವಲ್ಪ ಹೊತ್ತು ಅವನು ಕೈ ಕಾಲು ಅಲುಗಾಡಿಸಿ ಮತ್ತೆ ನಿಷ್ಪಂದನಾದ. ಡಾಕ್ಟರು ಇದೆಲ್ಲವನ್ನೂ ವ್ಯಾಕುಲ ಭಾವದಿಂದ ನೋಡುತ್ತಿದ್ದರು. ಅವರ ಮುಖದ ಮೇಲೆ ಅನೇಕ ಭಾವದ ಗೆರೆಗಳು ಮೂಡಿ ಮರೆಯಾದವು. ಆದರೆ, ವ್ಯಾಕುಲ ಭಾವ ಮಾತ್ರ ಹಾಗೇ ಇತ್ತು. ಅನಂತರ, ಅವರು ಹರಿತವಾದ ಚಾಕು ಹೊರತೆಗೆದು ಅವನ ಅತ್ಯಂತ ಪ್ರಶಸ್ತವಾದ ಯಕೃತ್ತನ್ನು ಸೀಳಿಹಾಕಿದರು ಮತ್ತು ಶ್ವಾಸಕೋಶವನ್ನು ಹೊರತೆಗೆದು ತಮ್ಮ ಟೇಬಲ್ ಮೇಲೆ ಹೋಗಿ ಕುಳಿತರು.

ಸ್ವಲ್ಪ ಸಮಯದ ಅನಂತರ ಪೊಲೀಸ್ ಇನ್‌ಸ್ಪೆಕ್ಟರ್ ಡಾಕ್ಟರ್ ಅವರನ್ನು ತನ್ನ ಜೊತೆ ಕರೆದೊಯ್ಯುವ ವಾರಂಟ್ ತೆಗೆದುಕೊಂಡು ಬಂದರು. ಆಗ ಅವರು ದೊಡ್ಡ ಸೂಕ್ಷ್ಮವಾದ ಅಣುವೀಕ್ಷಣ ಯಂತ್ರವನ್ನು ತೆಗೆದುಕೊಂಡು ರಕ್ತಸಿಕ್ತವಾದ ಮಾನವನ ಶ್ವಾಸಕೋಶದ ಮೇಲೆ 'ವಾಟರ್–ಕ್ರಷ್'ನ ಪರಿಣಾಮವನ್ನು ಪರೀಕ್ಷೆ ಮಾಡುತ್ತಿದ್ದರು.

ಇನ್‌ಸ್ಪೆಕ್ಟರ್ ಅವರ ಬಳಿಗೆ ಹೋಗಿ ತನ್ನ ಜೊತೆ ಹೊರಡಲು ಒತ್ತಾಯಿಸಿದಾಗ ಡಾಕ್ಟರ್ ಎದ್ದು ಮುಗ್ಧ ದೃಷ್ಟಿಯಿಂದ ಅವರ ಕಡೆ ನೋಡುತ್ತ, "ನಾನು ಗೊತ್ತಿದ್ದೂ ಈ ಮನುಷ್ಯನ ಕೊಲೆ ಮಾಡಿದ್ದೇನೆ. ಕಾರಣ, ಈ ಮನುಷ್ಯನ ಯಕೃತ್ತನ್ನು ಸೀಳಿ ನೋಡದೆ, ಪೂರ್ತಿಯಾಗಿ ಜರ್ಜರಿತವಾಗಿರುವ ಕ್ಷಯರೋಗ ಪೀಡಿತ ಶ್ವಾಸಕೋಶ ಕೂಡ ಮತ್ತೆ ಹೇಗೆ ಗುಣವಾಗುತ್ತದೆ ಎಂಬುದನ್ನು ಅರಿಯುವುದು ಅಸಾಧ್ಯವಾಗಿತ್ತು. ಆದ್ದರಿಂದ ನಾನು ಲೋಕ ಕಲ್ಯಾಣದ ಮಹತ್ತಾದ ಕರ್ತವ್ಯದ ಎದುರು ಸಾಧಾರಣ ಮಾನವೀಯ ವಿವೇಕವನ್ನು ಬಿಟ್ಟುಕೊಟ್ಟು ಇವನನ್ನು ಕೊಂದು ಹಾಕಿದೆ ಎಂಬುದನ್ನು ನಿಸ್ಸಂಕೋಚವಾಗಿ ಒಪ್ಪಿಕೊಳ್ಳುತ್ತೇನೆ" ಎಂದು ಹೇಳಿದರು.

ಡಾಕ್ಟರ್ ಹಿಲ್ ವೈಯಕ್ತಿಕ ಜಾಮೀನಿನ ಮೇಲೆ ಬಂಧನದಿಂದ ಬಿಡುಗಡೆಗೊಂಡಿದ್ದಾರೆ ಎಂಬುದನ್ನು ಹೇಳಬೇಕಾದ ಅಗತ್ಯವಿಲ್ಲ. ಕಾರಣ ಅವರ ಬಿಡುಗಡೆ ಕಲ್ಯಾಣಕಾರಿಯಾದ್ದು. ಈ ಮೊಕದ್ದಮೆಯನ್ನು ನಾಳೆ ನ್ಯಾಯಾಲಯದಲ್ಲಿ ಪ್ರಸ್ತುತಪಡಿಸಲಾಗುವುದು. ಶೀಘ್ರದಲ್ಲೇ ಈ ಮೊಕದ್ದಮೆಯ ಕೀರ್ತಿ ಇಡೀ ಯೂರೋಪ್ ಮತ್ತು ಅನಂತರ ಸಮಸ್ತ ಜಗತ್ತಿಗೆ ವ್ಯಾಪಿಸಲಿದೆ.

ಈ 'ತುಚ್ಛ' ಅಪರಾಧಕ್ಕಾಗಿ ಆ ಮಹಾ ಮಾನವ ಕಲ್ಯಾಣಕಾರೀ ವೈದ್ಯ ಹಿಲ್ ಅವರಿಗೆ 'ನ್ಯೂಗೇಟ್'ನ ನೇಣುಗಂಬವನ್ನೇರಬೇಕಾಗಿ ಬರುವುದಿಲ್ಲ ಎಂಬುದು ನಮ್ಮ ದೃಢವಿಶ್ವಾಸ. ನಾಳಿನ ಮನುಷ್ಯನ ಬಗೆಗಿನ ಗಂಭೀರ ಪ್ರೀತಿ ಮತ್ತು ಅದಕ್ಕಾಗಿ ಒಬ್ಬ ಮನುಷ್ಯನ ತುಚ್ಛ ಜೀವದ ಕೊಲೆಯನ್ನು ಅಪರಾಧವೆಂದು ಒಪ್ಪದಿರುವ ಪ್ರಪಂಚದ ಮಹಾಪ್ರಾಣ ರೂಪರಾದ ವಿಜ್ಞಾನಿಗಳು ಎಂಥವರಾದರೂ ಆಗಿರಲಿ, ಡಾ. ಹಿಲ್ ಅವರ ಅಮೂಲ್ಯ ಜೀವವನ್ನು ಉಳಿಸಲು ತಮ್ಮ ಕಡೆಯಿಂದ ಏನನ್ನೇ ಆದರೂ ಮಾಡದಿರುವುದಿಲ್ಲ.

●